# ಸುದ್ದಿ ಸಂಚಯ

## ಯುನೆಸ್ಕೊದಲ್ಲಿ ರಾಮಕೃಷ್ಣ ಮಿಷನ್ನಿನ ಪ್ರಸ್ತಾಪ

ಯುನೆಸ್ಕೊ-ಮದನಜಿತ್ ಸಿಂಘ್ ಪ್ರಶಸ್ತಿಯನ್ನು ಮ್ಯಾನ್ಮಾರ್‌ನ ಆಂಗ್ ಸನ್ ಸೂ ಕೀಯರಿಗೆ ನೀಡಬೇಕೆಂದು ಪ್ಯಾರಿಸ್‌ನಲ್ಲಿ ಇದಕ್ಕೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ಸಾರಲಾಯಿತು. ಸಹನೆ ಮತ್ತು ಅಹಿಂಸೆಯ ಪ್ರವರ್ತನೆಗಾಗಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಇದೇ ಸಂದರ್ಭದಲ್ಲಿ ಭಾರತದಲ್ಲಿನ ರಾಮಕೃಷ್ಣ ಮಿಷನ್‌ನನ್ನು ಆದರಪೂರ್ವಕವಾಗಿ ಪ್ರಸ್ತಾಪಿಸುತ್ತಾ "ಸಹಾನುಭೂತಿ ಮತ್ತು ಅಹಿಂಸಾ ತತ್ತ್ವಗಳ ಸಂವರ್ಧನೆಗಾಗಿ ಹಾಗೂ ಸಂತ್ರಸ್ತರ ನೆರವಿಗೆ ನಿಂತು ಅವಿರತವಾಗಿ ಶ್ರಮಿಸುತ್ತಿರುವ" (ಇಂಗ್ಲೀಷ್ ದೈನಿಕ *The Hindu* ಭಾನುವಾರ ಅಕ್ಟೋಬರ್ ೬ರ ಸಂಚಿಕೆ, ಪು.೧೨) ರಾಮಕೃಷ್ಣ ಮಿಷನ್‌ನ್ನು ಪ್ರಶಂಸಿಸಿದರು.

❖

## ಜಾಗತಿಕ ಸಮುದಾಯಕ್ಕೆ ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಬಳುವಳಿ

ಅಮೆರಿಕದಲ್ಲಿನ ಭಾರತೀಯ ವಿದ್ಯಾಭವನದ ಶಾಖೆ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಕಲ್ಚರ್ ಸೆಪ್ಟಂಬರ್ ೨೧ರಂದು ಸ್ವಾಮಿ ವಿವೇಕಾನಂದರು ಜಾಗತಿಕ ಸಮುದಾಯಕ್ಕೆ ಬಿಟ್ಟುಹೋಗಿರುವ ಅಧ್ಯಾತ್ಮಿಕ ಬಳುವಳಿಯ ಪುಣ್ಯಸ್ಮರಣೆಯನ್ನು ಆಚರಿಸಿತು. ಚಾರಿತ್ರಿಕ ಮಹತ್ವವನ್ನು ಪಡೆದಿದ್ದ ಈ ಕಾರ್ಯಕ್ರಮವನ್ನು ನ್ಯೂಯಾರ್ಕ್ ನಗರದಲ್ಲಿನ ಫ್ಯಾಷನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಹ್ಯಾಪ್ಟ್ ಸಭಾಂಗಣದಲ್ಲಿ ಅಂದು ಇಡೀ ದಿನ ಹಮ್ಮಿಕೊಳ್ಳಲಾಗಿತ್ತು—ಬೆಳಗ್ಗೆ ೯.೩೦ ರಿಂದ ರಾತ್ರಿ ೯.೩೦ರವರೆಗೆ. ೧೪.೦೯.೨೦೦೨ರಂದು ಪ್ರಧಾನಮಂತ್ರಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರು ಸಮಾರಂಭವನ್ನು ಉದ್ಘಾಟಿಸಿ ಸ್ವಾಮಿ ವಿವೇಕಾನಂದರ ಸಂದೇಶದ ಜಾಗತಿಕ ಮಹತ್ವವನ್ನು ವಿವರಿಸಿ ಎಲ್ಲರೂ ಅವರನ್ನು ಅನುಸರಿಸಬೇಕೆಂದು ಕರೆಕೊಟ್ಟರು. ಅದೇ ಸಂದರ್ಭದಲ್ಲಿ ಅವರು ರಾಜಕೋಟ್‌ನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಜಿತಾತ್ಮಾನಂದಜಿಯವರ *Swami Vivekananda : The Prophet of India* ಎಂಬ ಗ್ರಂಥವನ್ನು ಬಿಡುಗಡೆ ಮಾಡಿದರು.

ಇಂದಿನ ಜಾಗತಿಕ ಸಮುದಾಯದಲ್ಲಿ ಶಾಂತಿ ನೆಲೆಸಬೇಕಾದರೆ ಆಧ್ಯಾತ್ಮಿಕತೆ ಮತ್ತು ಸರ್ವಧರ್ಮಗಳಲ್ಲೂ ಆದರದ ಮನೋಭಾವವನ್ನು ಮೈಗೂಡಿಸಿಕೊಳ್ಳುವ ಅಗತ್ಯದ ಅರಿವನ್ನು ಮೂಡಿಸುವ ಪ್ರಯತ್ನ ಅದಾಗಿತ್ತು. ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದರ ಚಿಂತನೆಗಳ ಪ್ರಭಾವ ಮತ್ತು ಅದರ ವಿವಿಧ ಆಯಾಮಗಳನ್ನು ಕುರಿತ ೧೬ ಉಪನ್ಯಾಸಗಳನ್ನು ಅಮೆರಿಕ, ಕೆನಡ, ಮತ್ತು ಭಾರತದ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಶಾಖೆಗಳಿಂದ ಆಗಮಿಸಿದ್ದ ಸ್ವಾಮೀಜಿಯವರು ನೀಡಿದರು. ಪ್ರತಿಯೊಂದು ಉಪನ್ಯಾಸದ ನಂತರವೂ ಹಾಡುಗಳ ಮತ್ತು ವಿಡಿಯೋಗಳ ಪ್ರಭಾವಕಾರಿ ನಿರೂಪಣೆಗಳಿದ್ದುವು. ಡಾ. ಮತ್ತು ಶ್ರೀಮತಿ ಮಹೇಂದ್ರ ಜಾನಿ ಅವರ ಮಾರ್ಗದರ್ಶನದಲ್ಲಿ ನ್ಯೂಜೆರ್ಸಿಯ ವಿವೇಕಾನಂದ ವಿದ್ಯಾಪೀಠದ ವಿದ್ಯಾರ್ಥಿಗಳಿಂದ ನಡೆಸಿಕೊಡಲ್ಪಟ್ಟ ಸಾಂಸ್ಕೃತಿಕ ವಿನೋದಾವಳಿಗಳು ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿದ್ದವು. ೮೦೦ ಜನ ಶ್ರೋತೃಗಳಿಂದ ಸಭಾಂಗಣವು ತುಂಬಿಹೋಗಿತ್ತು. ಸಭೆಯಲ್ಲಿ ಭಾರತೀಯರೂ ಸೇರಿದಂತೆ ವಿವಿಧ ಜನಾಂಗದವರು ಮತ್ತು ಧರ್ಮೀಯರು ನೆರೆದಿದ್ದರು. ಸೆಪ್ಟೆಂಬರ್ ೧೧ರ ಭಯೋತ್ಪಾದನೆಯ ಕ್ರೂರ ಪರಿಣಾಮದಿಂದ ವಿಚಲಿತವಾಗಿರುವ ಅಮೆರಿಕನರಿಗೆ ಇಂತಹ ಕಾರ್ಯಕ್ರಮಗಳು ಸಾಂತ್ವನ ನೀಡುವುದರಲ್ಲಿ ಸಂದೇಹವಿಲ್ಲ. ಸ್ವಾಮಿ ವಿವೇಕಾನಂದರ ಸಮನ್ವಯಭಾವದ, ವಿಶ್ವಭ್ರಾತೃತ್ವದ, ಮಾನವೀಯತೆಯ ತುಡಿತದಿಂದ ಹೊರಹೊಮ್ಮಿದ ವಿಶ್ವಸಂದೇಶ ಸಭಿಕರೆಲ್ಲರ ಹೃದಯವನ್ನು ಮಿಡಿಯಿತು ಎಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಕಾರ್ಯಕ್ರಮಗಳಿಗೆ ಆಗಮಿಸಿದ್ದ ಎಲ್ಲರಿಗೂ ಊಟೋಪಚಾರಗಳ ವ್ಯವಸ್ಥೆ ಇತ್ತು.

ಕಾರ್ಯಕ್ರಮದಲ್ಲಿ ಕೊಡಲಾದ ಉಪನ್ಯಾಸಗಳೆಲ್ಲವನ್ನೂ ಲೇಖನಗಳ ರೂಪದಲ್ಲಿ ಒಳಗೊಂಡಿದ್ದ ಒಂದು ಸ್ಮರಣ ಸಂಚಿಕೆ *The Legacy of Swami Vivekananda* ಯನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದ ಇನ್ನೊಂದು ವಿಶೇಷ ಆಕರ್ಷಣೆ Arise! Awake!! ಎಂಬ ಹೆಸರಿನ ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶವನ್ನು ಕುರಿತ ಚಿತ್ರಪ್ರದರ್ಶನ. ಮೈಸೂರು ಶ್ರೀರಾಮಕೃಷ್ಣ ಆಶ್ರಮದಿಂದ, ಅದರ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿಯವರ ಅಗಾಧ ಪರಿಶ್ರಮದಿಂದ ತಯಾರಿಸಲ್ಪಟ್ಟ ಈ ಚಿತ್ರಪ್ರದರ್ಶನವನ್ನು ಅಲ್ಲಿಯ ಸಭಾಂಗಣದ ಹೊರಾವರಣದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರೂ ಅದನ್ನು ಆಸಕ್ತಿಯಿಂದ ವೀಕ್ಷಿಸಿ, ಅನೇಕರು ಅದರಲ್ಲಿ ಬರುವ ವಿವೇಕಾನಂದರ ಶಕ್ತಿಶಾಲೀ ನುಡಿಗಳನ್ನು ಬರೆದುಕೊಂಡರು. ಇಂತಹ ಚಿತ್ರಪ್ರದರ್ಶನವನ್ನು ಭಾರತೀಯ ವಿದ್ಯಾಭವನದವರು ಬೇರೆ ಬೇರೆ ಕಡೆಗಳಲ್ಲಿಯೂ ಏರ್ಪಡಿಸಬೇಕೆಂದು ವೀಕ್ಷಕರು ಅಭಿಪ್ರಾಯಪಟ್ಟರು.

❖